ಓ.ಎಸ್.183/2021 ಡಿ.ಡಬ್ಲು-1
*ಶಂಕ್ರಪ್ಪ ತಂದೆ ನಾಗಪ್ಪ*

ದಿ.02-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಕೆ.ಕೆ.ವಿ ವಕೀಲರಿಂದ 3 ರಿಂದ 7ನೇ ಪ್ರತಿವಾದಿಯರ ಪರವಾಗಿ:-**

2ನೇ ಪ್ರತಿವಾದಿ ನನ್ನ ತಾಯಿ. ಭೀಮವ್ವಳಿಗೆ 82 ವರ್ಷ ವಯಸ್ಸು ಇರುತ್ತದೆ. ಖರೀದಿ ಪತ್ರ ಆದಾಗ ನನಗೆ ವಯಸ್ಸು 15 ವರ್ಷ ಇತ್ತು. ಖರೀದಿ ಪತ್ರ ಆದಾಗ 1ನೇ ಪ್ರತಿವಾದಿ ಭೀಮವ್ವ ಏನು ಮಾಡಿದ್ದಾರೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರಕ್ಕೆ ಭೀಮ್ಮವ್ವ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶಿವಶಂಕ್ರಪ್ಪ ತೀರಿಕೊಂಡ ನಂತರ ಭೀಮ್ಮವ್ವ ಮನೆತನ ನೋಡಿಕೊಳ್ಳುತ್ತಿದ್ದಳು ಎಂದರೆ ಸರಿ. ನಮ್ಮ ತಾಯಿ ಸಿದ್ದವ್ವ ಗಂಡನ ಮನೆಯಲ್ಲಿ ಬಾಳುವೆ ಮಾಡಲಾರದೆ ಅಜ್ಜಿಯ ಮನೆಯಲ್ಲಿ ಇದ್ದಳು ಎಂದರೆ ಸರಿಯಲ್ಲ. ಅವರು ಬೇರೆ ವಾಸವಾಗಿದ್ದರು ಎನ್ನುತ್ತಾರೆ. 1ನೇ ಪ್ರತಿವಾದಿಯೇ ನಮ್ಮನ್ನು ಮತ್ತು ನನ್ನ ತಾಯಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯೇ ನಮ್ಮ ಮನೆಯಲ್ಲಿ ಇರುತ್ತಿದ್ದರು ಎನ್ನುತ್ತಾರೆ. ಹನುಮಪ್ಪನ ಹೆಂಡತಿ ಮಲ್ಲಮ್ಮ ಕರಡಕಲ್ಲಿನಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. 7ನೇ ಪ್ರತಿವಾದಿ ಮಲ್ಲಮ್ಮ 4 ಮಕ್ಕಳನ್ನು ಹಡೆದ ನಂತರ ನಮ್ಮ ಅಜ್ಜಿ ಅವರನ್ನು ಮನೆಯಿಂದ ಹೊರಹಾಕಿದ್ದರಿಂದ ಅವರು ಮಸ್ಕಿಯಲ್ಲಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಅಜ್ಜಿಗೆ ಮತ್ತು 7ನೇ ಪ್ರತಿವಾದಿಗೆ ಮದುವೆಯಾದ 5-6 ತಿಂಗಳಿಗೆ ಹೊಂದಾಣಿಕೆಯಾಗಿರುವುದಿಲ್ಲ ಎನ್ನುತ್ತಾರೆ. ಇತ್ತೀಚೆಗೆ 6 ವರ್ಷಗಳ ಹಿಂದೆ 7ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಮಸ್ಕಿಗೆ ಹೋಗಿರುತ್ತಾರೆ. ಸುಮಾರು 25-30 ವರ್ಷಗಳ ಹಿಂದೆ 1ನೇ ಪ್ರತಿವಾದಿ 3 ರಿಂದ 7ನೇ ಪ್ರತಿವಾದಿಗಳನ್ನು ಮನೆಯಿಂದ ಹೊರ ಹಾಕಿದ್ದರಿಂದ ಅವರು ಮಸ್ಕಿಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

2. ಹೊಲ ಒಟ್ಟು 26 ಎಕರೆ 1 ಗುಂಟೆ ಇರುತ್ತದೆ. ಶಿವಶಂಕ್ರಪ್ಪ ತೀರಿಕೊಂಡ ನಂತರ ಒಟ್ಟು ಹೊಲ ಅವರ ಮಗ ಹನುಮಪ್ಪನ ಹೆಸರಿಗೆ ಬಂದಿತ್ತು ಎಂದರೆ ಸರಿ. 1ನೇ ಪ್ರತಿವಾದಿ ತನ್ನ ಪಾಲಿನ ಆಸ್ತಿಯನ್ನು ಮಾರಾಟ ಮಾಡುವ ಇಚ್ಛೆಯಿಂದ ಹನುಮಪ್ಪನ ಹೆಸರಿನಲ್ಲಿ ಹೊಲ ಇರುವುದರಿಂದ ಆತನ ಮೂಲಕ ಖರೀದಿ ಪತ್ರ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ವಿಷಯ ಗೊತ್ತಾಗಿ 1998 ರಲ್ಲಿ 7ನೇ ಪ್ರತಿವಾದಿ ಮಲ್ಲಮ್ಮ ತನ್ನ ಗಂಡ ಮತ್ತು ಅತ್ತೆಯ ಮೇಲೆ ಹಾಕಿದ್ದಳು ಎಂದರೆ ಸರಿ. ಮದನ್ ರವರ ತಾಯಿಗೆ ಆಸ್ತಿ ಮಾರಾಟ ಮಾಡುತ್ತಾರೆ ಎನ್ನುವ ಸುದ್ದಿ ಕೇಳಿ 7ನೇ ಪ್ರತಿವಾದಿ ಹನುಮಂತನ ಮೇಲೆ ದಾವೆ ಹೂಡಿದ್ದರು ಎಂದರೆ ಸರಿ.

ಸದರಿ ದಾವೆಯಲ್ಲಿ ಡಿಕ್ರಿ ಆಗಿದ್ದರೂ ಸಹ ವಾದಿ ಮದನ್ ರವರು ಭೀಮ್ಮವ್ವ ಹನುಮಪ್ಪನ ಮುಖಾಂತರ ಖರಿದಿ ಪತ್ರ ಮಾಡಿ ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಅವರು ಮಾರಾಟ ಮಾಡಿದ್ದರಿಂದ ಖರೀದಿ ಪತ್ರಕ್ಕೆ ಸಹಿ ಹಾಕಿರುತ್ತಾಳೆ ಎಂದರೆ ಸರಿಯಲ್ಲ. ನಮ್ಮ ಅಜ್ಜಿ ಮತ್ತು ತಾಯಿ ತಮ್ಮ ಪಾಲಿನ ಆಸ್ತಿ ಇರುವದರಿಂದ ಖರೀದಿ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ೩ ರಿಂದ 7ನೇ ಪ್ರತಿವಾದಿಯರಿಗೆ ಈ ಖರೀದಿ ಪತ್ರ ಆಗಿರುವ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರಕ್ಕೆ ೩ ರಿಂದ 7ನೇ ಪ್ರತಿವಾದಿಯರ ಸಹಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಭೀಮವ್ವಳೆ ಹನುಮಪ್ಪನ ಮುಖಾಂತರ ತನ್ನ ಪಾಲಿನ ಆಸ್ತಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಅಜ್ಜಿ ಖರೀದಿ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದರೂ ಸಹ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅಜ್ಜಿ ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ 1 ಮತ್ತು 2ನೇ ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಎಲ್ಲ ವಿಷಯಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

೩. 7ನೇ ಪ್ರತಿವಾದಿ ದಾವೆ ಡಿಕ್ರಿಯಾಗಿ ಎಫ್.ಡಿ.ಪಿ ಪುರಸ್ಕೃತಗೊಂಡು ಡಿಕ್ರಿಯ ಪ್ರಕಾರ ಅವರವರ ಹೆಸರಿನಲ್ಲಿ ಆಸ್ತಿಗಳು ನಮೂದಾಗಿದ್ದರೂ ಸಹ ಹನುಮಪ್ಪನ ಹೆಸರಿನಲ್ಲಿರುವ ಆಸ್ತಿಯು ಮಲ್ಲಮ್ಮಳ ಹೆಸರಿಗೆ ಆಗದಂತೆ ನಾವು ಕಂದಾಯ ಇಲಾಖೆಗೆ ತಪ್ಪು ಮಾಹಿತಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಎಫ್.ಡಿ.ಪಿ ಪ್ರಕಾರ ಹನುಮಪ್ಪನ ಆಸ್ತಿ ಮಲ್ಲಮ್ಮನ ಹೆಸರಿಗೆ ಆಗಬೇಕು ಎಂದು ಆದೇಶ ಇದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅಜ್ಜಿ ಮತ್ತು ನಮ್ಮ ತಾಯಿಯ ಪಾಲಿನ ಆಸ್ತಿಯನ್ನು ಉಳಿಸಿಕೊಳ್ಳಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.